## ಟಿಕೆಟ್ ಮರೆತಿರಾ? ಪಾಸ್‌ಬುಕ್ ಇದೆ!




ಕಾರ್ಡುಗಳು, ಕೂಪನ್, ಟಿಕೆಟ್.. ಎಲ್ಲವನ್ನೂ ವ್ಯಾಲೆಟ್‌ನಲ್ಲಿಟ್ಟುಕೊಂಡು ವ್ಯಾಲೆಟ್ ಅನ್ನೇ ಮರೆತು ಬಂದಿರಾ? ಇಂತಹ ಫಜೀತಿಯಿಂದ ನಿಮ್ಮನ್ನು ಬಚಾವ್ ಮಾಡಲು 'ಪಾಸ್‌ಬುಕ್' ಎಂಬ ಹೊಸ ಅಪ್ಲಿಕೇಶನ್ ಬಂದಿದೆ.

'ಆ್ಯಪಲ್ ಐಒಎಸ್ 6'ಗಾಗಿ ತಂದಿರುವ 'ಪಾಸ್‌ಬುಕ್' ಒಂದು ರೀತಿಯ ಡಿಜಿಟಲ್ ವ್ಯಾಲೆಟ್‌ನಂತೆ ಕೆಲಸ ಮಾಡುತ್ತದೆ. ಜೊತೆಗೆ ಏನಾದರೂ ಬದಲಾವಣೆ ಆದಲ್ಲಿ ನಿಮ್ಮನ್ನು ಎಚ್ಚರಿಸುತ್ತದೆ. ಅಂದರೆ ನೀವೊಂದು ಕ್ರಿಕೆಟ್ ಪಂದ್ಯದ ಟಿಕೆಟ್ ಖರೀದಿಸಿದ್ದರೂ ಅದನ್ನು ಮರೆತು ಹೋಗಿದ್ದೀರಾ ಎಂತಿಟ್ಟುಕೊಳ್ಳಿ. ಆದರೆ ಫೋನನ್ನು ಮರೆತು ಹೋಗಬೇಡಿ. ನಿಮ್ಮ ಇ-ಮೇಲ್ ಇನ್‌ಬಾಕ್ಸ್‌ಗೆ ಬಂದ ಟಿಕೆಟ್ ದೃಢಪಡಿಸುವ ಸಂದೇಶ ತೆರೆಯಿರಿ. 'ಆ್ಯಡ್ ಟು ಪಾಸ್‌ಬುಕ್' ಲಿಂಕ್ ಕ್ಲಿಕ್ ಮಾಡಿ. ನಂತರ ಟಿಕೆಟ್ ಮರೆತು ಹೋದರೂ ಐಫೋನ್‌ನಲ್ಲಿರುವ ಈ ನಂಬರ್ ನೋಡಿ ಭದ್ರತಾ ಸಿಬ್ಬಂದಿ ನಿಮಗೆ ಕ್ರೀಡಾಂಗಣದೊಳಗೆ ಪ್ರವೇಶ ನೀಡುತ್ತಾರೆ.




## ಮ್ಯಾಪ್ ಮೇಕರ್

ಗೂಗ್ಲ್ ಆ್ಯಂಡ್ರಾಯ್ಡ್‌ಗಾಗಿ ಪರಿಷ್ಕೃತ ಗೂಗ್ಲ್ ಮ್ಯಾಪ್ ಅಪ್ಲಿಕೇಶನ್ ಹೊರತಂದಿದೆ. ಇದು ಇತರ ಸಾಧನಗಳು, ಅಂದರೆ ಮೊಬೈಲ್ ಮತ್ತು ಡೆಸ್ಕ್‌ಟಾಪ್ ಜೊತೆ ಹೊಂದಾಣಿಕೆ ಏರ್ಪಡಿಸುತ್ತದೆ. ಗೂಗ್ಲ್‌ಗೆ ಸೈನ್ ಮಾಡಿ ಡೆಸ್ಕ್‌ಟಾಪ್‌ನಲ್ಲಿ ಸ್ಥಳದ ಹೆಸರನ್ನು ಹುಡುಕಾಡಿದರೆ, ಅದು ನಿಮ್ಮ ಆ್ಯಂಡ್ರಾಯ್ಡ್ ಫೋನಿನಲ್ಲಿ ಮೂಡುತ್ತದೆ. 'ಮೈ ಪ್ಲೇಸಸ್' ತಲೆಬರಹದ ಅಡಿಯಲ್ಲಿ ಹಿಂದೆ ಹುಡುಕಾಡಿದ ಸ್ಥಳಗಳ ಹೆಸರುಗಳು ಸಂಗ್ರಹವಾಗಿದ್ದು ಅವುಗಳನ್ನೂ ಅದು ತೋರಿಸುತ್ತದೆ. ಬಳಕೆದಾರರು ಅವುಗಳನ್ನು 'ವರ್ಕ್', 'ಹೋಂ' ಮೊದಲಾದ ಶೀರ್ಷಿಕೆ ಕೊಟ್ಟು ಉಳಿಸಿಕೊಳ್ಳಬಹುದು.

ಗೂಗ್ಲ್ ಮ್ಯಾಪ್ ಮೇಕರ್ ಬಳಸಿ ಎಡಿಟ್ ಕೂಡಾ ಮಾಡಬಹುದು.

## ಡಾಟ್‌ಲೆಸ್ ಕಾಂ

ಯಾವುದೇ ಇಂಟರ್‌ನೆಟ್ ಡೊಮೇನ್ ಹೆಸರು ಹೇಳುವಾಗ ಡಾಟ್‌ಕಾಂ.. ಡಾಟ್‌ಕಾಂ... ಎಂದು ಹೇಳುವುದು ಬಾಯಿಪಾಠ. ಇಂಟರ್‌ನೆಟ್ ಡೊಮೇನ್ ಹೆಸರನ್ನು ನೊಂದಾಯಿಸುವಾಗ 'ಕಾಂ' ಹಿಂದೆ 'ಡಾಟ್' ಇರಲೇಬೇಕು. ಆದರೆ ಹಲವರು ಈ 'ಡಾಟ್‌ಲೆಸ್' ಹೆಸರಿಗಾಗಿ ಐಸಿಎಎನ್‌ಎನ್ (ಇಂಟರ್‌ನೆಟ್ ಕಾರ್ಪೊರೇಶನ್ ಫಾರ್ ಅಸೈನ್ಡ್ ನೇಮ್ಸ್ ಆ್ಯಂಡ್ ನಂಬರ್)ಗೆ ಅರ್ಜಿಗಳನ್ನು ಸಲ್ಲಿಸಿದ್ದರು. ಇವರಲ್ಲಿ ಅಮೆಜಾನ್ ಮುಂದಿತ್ತು. ಅಂದರೆ ಎಚ್‌ಟಿಟಿಪಿ://ಮ್ಯೂಸಿಕ್, ಎಚ್‌ಟಿಟಿಪಿ://ನ್ಯೂಸ್... ಎಂದು ನೇರವಾಗಿ ಬಳಸಬಹುದು ಎಂಬುದು ಹಲವರ ವಾದ. ಐಸಿಎಎನ್‌ಎನ್ ಈ ಅರ್ಜಿಗಳನ್ನೂ ಸ್ವೀಕರಿಸಿದೆ. ಜೊತೆಗೆ ಡಾಟ್‌ಲೆಸ್ ಬಳಕೆ ವಿರುದ್ಧದ ಅಹವಾಲುಗಳನ್ನೂ ಸ್ವೀಕರಿಸಿದೆ.

ಡಾಟ್‌ಲೆಸ್ ವೆಬ್‌ಸೈಟ್ ಹೆಸರು ವೆಬ್ ಬ್ರೌಸರ್, ಪ್ರೊಟೊಕಾಲ್‌ನಂತಹ ಅಪ್ಲಿಕೇಶನ್‌ಗಳನ್ನು ಹಾಳು ಮಾಡುತ್ತದೆ. ಜೊತೆಗೆ ಕಂಪೆನಿಗಳು ತಮ್ಮ ಉದ್ಯೋಗಿಗಳ ಸಲುವಾಗಿ ಮಾಡುವ ಇಂಟ್ರಾನೆಟ್ ಬಳಕೆಗೂ ತಡೆಯೊಡ್ಡುತ್ತದೆ ಎಂಬ ವಾದವೂ ಇದೆ. ಈಗ ಚೆಂಡು ಐಸಿಎಎನ್‌ಎನ್ ಅಂಗಳದಲ್ಲಿದ್ದು ಡಾಟ್‌ಲೆಸ್ ಕಾಮ್ ಕೊಡುವುದು ಬಿಡುವುದು ಅದಕ್ಕೆ ಸೇರಿದ್ದು.



## ವೆಬ್‌ಕ್ಯಾಮಾಗಿ ಆ್ಯಂಡ್ರಾಯ್ಡ್

ನಿಮ್ಮ ಪರ್ಸ್‌ನಲ್ ಕಂಪ್ಯೂಟರ್‌ನಲ್ಲಿ ವೆಬ್‌ಕ್ಯಾಮೆರಾ ಇಲ್ಲವೇ? ಹೊಸದನ್ನು ಖರೀದಿಸುವ ಉದ್ದೇಶವೂ ಇಲ್ಲವೇ? ಅಡ್ಡಿಯಿಲ್ಲ. ನಿಮ್ಮ ಬಳಿ ಆ್ಯಂಡ್ರಾಯ್ಡ್ ಇದ್ದರೆ ಅದನ್ನು ವೆಬ್‌ಕ್ಯಾಮ್‌ನಂತೆ ಬಳಸಬಹುದು. ಸ್ನೇಹಿತರ ಮತ್ತು ಕುಟುಂಬ ಸದಸ್ಯರ ಜೊತೆ ಹರಟಲು, ಅಷ್ಟೇಕೆ ಗ್ರಾಹಕರೊಂದಿಗೆ ಚರ್ಚಿಸಲೂ ವೆಬ್‌ಕ್ಯಾಮ್ ಉಪಯುಕ್ತ.

ಫೋನ್‌ನಲ್ಲಿ ಫ್ರಂಟ್ ಫೇಸಿಂಗ್ ಕ್ಯಾಮೆರಾ ಇಲ್ಲವೆಂಬ ಅಳುಕು ಬೇಡ. ಹಿಂಭಾಗದ ಕ್ಯಾಮೆರಾವನ್ನು ಇಲ್ಲಿ ಬಳಕೆ ಮಾಡಬಹುದು. ಜೊತೆಗೆ ಬ್ಯಾಟರಿ ಹೆಚ್ಚು ಖರ್ಚಾಗುವುದರಿಂದ ಪ್ಲಗ್ ಮಾಡಿಕೊಂಡಿರಿ. ನಿಮ್ಮ ಫೋನಿಗೆ ಐಪಿ ವೆಬ್‌ಕ್ಯಾಮ್ ಕಾಪಿಯನ್ನು ಅಳವಡಿಸಿ. ನಂತರ ಅದರ ಸಾಫ್ಟ್‌ವೇರ್, ಐಪಿ ಕ್ಯಾಮೆರಾ ಅಡಾಪ್ಟರ್‌ನ್ನು ವಿಂಡೋಸ್‌ಗೆ ಅಳವಡಿಸಿ. ಕ್ರೋಮ್ ಅಥವಾ ಫೈರ್‌ಫಾಕ್ಸ್ ಕಂಪ್ಯೂಟರ್‌ಗೆ ಇರಲಿ. ನಂತರ ಫೋನ್ ನಲ್ಲಿರುವ ಐಪಿ ವೆಬ್‌ಕ್ಯಾಂ ಅಪ್ಲಿಕೇಶನ್ ತೆರೆಯಿರಿ. ಬೆಳಕು, ರೆಸೊಲ್ಯೂಷನ್, ಗುಣಮಟ್ಟ, ಎಫ್‌ಪಿಎಸ್ ಮಿತಿ ಎಲ್ಲವನ್ನೂ ಸಿದ್ಧಪಡಿಸಿ. ನಂತರ ಸ್ಟಾರ್ಟ್ ಸರ್ವರ್ ಮೇಲೆ ಕುಟ್ಟಿ. 'ಯೂಸ್ ಬ್ರೌಸರ್ ಬಿಲ್ಟ್ ಇನ್ ವ್ಯೂವರ್' ಆಯ್ಕೆ ಮಾಡಿ. ಐಪಿ ಕ್ಯಾಮೆರಾ ಅಡಾಪ್ಟರ್ ತೆರೆದು ಐಪಿ, ಪೋರ್ಟ್, ಯೂಸರ್ ನೇಮ್, ಪಾಸ್‌ವರ್ಡ್ ನೀಡಿ. ನಂತರ ಆಟೋಡಿಟೆಕ್ಟ್ ಮೇಲೆ ಕ್ಲಿಕ್ ಮಾಡಿ. ಈಗ ಯಾವ ಅಪ್ಲಿಕೇಶನ್, ಅಂದರೆ ಉದಾಹರಣೆಗೆ ಸ್ಕೈಪ್ ಬೇಕಾದರೆ ಅದನ್ನು ರಿಸ್ಟಾರ್ಟ್ ಮಾಡಿ ಮಾತನಾಡಲು ಶುರು ಮಾಡಬಹುದು.

■ ಎಸ್. ತುಂಬೆ